ಕೆ.ಸಿ.ಡಿ. ಸಮಾಚಾರ
ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ
ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ
KCD JOURNALISM CLUB DHARWAD
ಕರ್ನಾಟಕ ಕಾಲೇಜು ಧಾರವಾಡ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: ೨ ಸಂಪುಟ: ೧ ಪುಟ: ೧

# ಪ್ರೊ. ಸ.ಸ. ಮಾಳವಾಡ ಮತ್ತು ಡಾ. ಎಂ.ಎಂ. ಕಲಬುರ್ಗಿ ಅವರ ದಿವ್ಯ ಸ್ಮರಣೆ




**ಪ್ರೊ. ಶಾಂತಿನಾಥ ದಿಬ್ಬದ, ಡಾ ಜಿನದತ್ತ ಹಡಗಲಿ, ಡಾ. ಎಮ್ ಆರ್ ಹಿರೇಮಠ, ಡಾ. ರಾಜೇಶ್ವರಿ ಮಹೇಶ್ವರಯ್ಯ, ಡಾ. ಎಸ್ ಎಸ್ ಕಟ್ಟಿಮನಿ, ಡಾ. ಲಿಂಗರಾಜ ಅಂಗಡಿ ಚೆನ್ನಬಸಪ್ಪ ಚಿತ್ರದಲ್ಲಿದ್ದಾರೆ.**

ಕನ್ನಡ ಸಾಹಿತ್ಯದ ದಿಗ್ಗಜರಾದ ಪ್ರೊ ಸ.ಸ. ಮಾಳವಾಡ ಮತ್ತು ಡಾ. ಎಂ.ಎಂ. ಕಲಬುರ್ಗಿ ಅವರ ವಿಚಾರಧಾರೆಗಳನ್ನು ಇಂದಿನ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯದ ನಿವೃತ್ತ ಕುಲಸಚಿವರಾದ ಡಾ ಶಾಂತಿನಾಥ ದಿಬ್ಬದ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯ ಮತ್ತು ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದೊಂದಿಗೆ ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರನ್ ಮೆಮೊರಿಯಲ್ ಸಭಾಂಗಣದಲ್ಲಿ ಪ್ರೊ ಸ.ಸ.ಮಾಳವಾಡ ಮತ್ತು ಎಂ. ಎಂ. ಕಲಬುರ್ಗಿ ಅವರ ದಿವ್ಯ ಸ್ಮರಣೆ ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಧಾರವಾಡ ಒಂದು ಸಾಂಸ್ಕೃತಿಕ, ಸಾಹಿತಿಕ ಕೇಂದ್ರವಾಗಿದ್ದು, ಇಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಧಾರವಾಡದ ಇತಿಹಾಸವನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ ಎಂದ ಅವರು ಸ.ಸ.ಮಾಳವಾಡ ಮತ್ತು ಎಂ.ಎಂ. ಕಲಬುರ್ಗಿ ಅವರ ಕೃತಿಗಳನ್ನು ಇಂದಿನ ಪೀಳಿಗೆಯು ಅವಶ್ಯವಾಗಿ ತಿಳಿದುಕೊಳ್ಳಬೇಕಾಗಿದೆ. ಅವರ ಕೃತಿಗಳು ಕನ್ನಡ ಸಾಹಿತ್ಯಲೋಕಕ್ಕೆ ಒಂದು ಪರಂಪರೆಯನ್ನು ನೀಡಿದ ಕೊಡುಗೆ ಅವರಿಗೆ ಸಲ್ಲುತ್ತದೆ ಎಂದರು. ಇಬ್ಬರು ಮಹನೀಯರು ಗ್ರಾಮೀಣ ಪ್ರತಿಭೆವುಳ್ಳವರಾಗಿದ್ದು ಅವರಂತೆಯೇ ವಿದ್ಯಾರ್ಥಿಗಳಾದ ನೀವು ಕೂಡ ಜೀವನದಲ್ಲಿ ಮುಂದೆ ಸಾಗಿರಿ ಎಂದು ಕಿವಿಮಾತು ಹೇಳಿದರು. ಕಲಬುರ್ಗಿ ಅವರು ಸಮಾಜದ ಸಂಶೋಧನಗೆ ಹೆಚ್ಚು ಶ್ರಮವಹಿಸಿದರು. ಅವರ ಕಲ್ಯಾಣ ಕೆಟ್ಟಿತ್ತು ಎಂಬ ನಾಟಕ ಸತ್ಯವನ್ನು ಸಮಾಜಕ್ಕೆ ತಿಳಿಸಿತು ಎಂದ ಅವರು ಸತ್ಯದ ಕತ್ತನ್ನು ಹಿಚಕುತ್ತಿದ್ದಿರಿ ಎಂದು ಕಲಬುರ್ಗಿ ಅವರ ಮಾತನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷೀಯ ನುಡಿಗಳನ್ನಾಡಿದ ಪ್ರಾಚಾರ್ಯರಾದ ಡಾ. ಎಸ್.ಎಸ್. ಕಟ್ಟಿಮನಿ ಅವರು ಕರ್ನಾಟಕ ಮಹಾವಿದ್ಯಾಲಯವು ಕೇವಲ ಒಂದು ಶಿಕ್ಷಣ ಸಂಸ್ಥೆಯಲ್ಲ ಅದು ಮುತ್ತು ವಜ್ರಗಳನ್ನು ತಯಾರಿಸುವ ಕಾರ್ಖಾನೆ ಎಂಬ ಮಾತನ್ನು ಕಲಬುರ್ಗಿ ಅವರ ಮಾತನ್ನು ನೆನೆಪಿಸಿಕೊಂಡರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಮ್. ಆರ್. ಹೀರೆಮಠ ಅತಿಥಿಗಳನ್ನು ಸ್ವಾಗತಿಸಿದರು. ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ ಲಿಂಗರಾಜ ಅಂಗಡಿ ಪ್ರಾಸ್ತಾವಿಕವಾಗಿ ಮತನಾಡಿದರು. ಇದೇ ಸಂದರ್ಭದಲ್ಲಿ ಶ್ರೀ ಸ ಸ ಮಾಳವಾಡ ಅವರ ಪುತ್ರ ಚೆನ್ನಬಸಪ್ಪ ಹಾಜ-ರಿದ್ದರು. ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ ಡಿ ಬಿ ಕರಡೋಣಿ, ಡಾ ಮುಷ್ಟಿಗೇರೆ, ಡಾ ಬಿ ಎಸ್ ಭಜಂತ್ರಿ, ಡಾ ಹೊನ್ನೇಶ ಕಡೆನಾಯಕಹಳ್ಳಿ ಪ್ರಾಧ್ಯಾಪಕ ವರ್ಗ ಹಾಜರಿದ್ದರು ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಜೀವನದತ್ತ ಹಡಗಲಿ ನಿರೂಪಿಸಿದರು. ಡಾ ಸೋಮು ದೊಡ್ಡಮನಿ ವಂದಿಸಿದರು.

–ಅಭಿಷೇಕ್

# ೨೦೧೯ ರ ಪತ್ರಿಕೋದ್ಯಮ ವಿಭಾಗದ ಕಾರ್ಯಚಟುವಟಿಕೆ ಆರಂಭ





**ಪತ್ರಕರ್ತ ಗುರುರಾಜ ಜಮಖಂಡಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಸಂವಹನ ಕೂಟದ ಕಾರ್ಯಚಟುವಟಿಕೆಗಳನ್ನು ಉದ್ಘಾಟಿಸುತ್ತಿರುವದು ಹಾಗೂ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಿರುವದು.**

ಇರುವ ಸಮಯವನ್ನು ಸದುಪಯೋಗ ಪಡಿಸಿಕೊಂಡು ಕಲಿಕೆಯನ್ನು ಸಮಗ್ರವಾಗಿ ಮೈಗೂಡಿಸಿಕೊಂಡಾಗ ವಿಷಯದ ಪರಿಪೂರ್ಣತೆಯನ್ನು ಸಾಧಿಸಲು ಸಾಧ್ಯ ಎಂದು ಪತ್ರಕರ್ತ ಗುರುರಾಜ ಜಮಖಂಡಿ ಅವರು ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೇನ್ ಸಭಾಂಗಣದಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಸಂವಹನ ಕೂಟದ ಚಟುವಟಿಕೆಗಳನ್ನು ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಗ್ರಾಮೀಣ ಹಿನ್ನಲೆಯಿಂದ ಬರುವ ವಿದ್ಯಾರ್ಥಿಗಳು ಕೀಳರಿಮೆಯನ್ನು ತೊಡೆದು ತಮ್ಮಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬೇಕು ಎಂದ ಅವರು ಪತ್ರಿಕೋದ್ಯಮ ವಿದ್ಯಾರ್ಥಿಗಳು ಭಾಷೆಯ ಮೇಲೆ ಹಿಡಿತ ಸಾಧಿಸಬೇಕಾದರೆ ನಿರಂತರವಾದ ಅಧ್ಯಯನ ಅಗತ್ಯ ಆದ್ದರಿಂದ ವಿಷಯ ಸಂಗ್ರಹಣೆ, ಅದರ ವಿಶ್ಲೇಷಣೆ, ಶಬ್ದ ಬಳಕೆ ಮತ್ತು ಸಮಯದ ಪರಿಜ್ಞಾನದಂತಹ ಅಂಶಗಳನ್ನು ನಾವು ಅಧ್ಯಯನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಆ ವಿಷಯದ ಮೇಲೆ ಹಿಡಿತ ಸಾಧಿಸಬಹುದು ಎಂದು ಅವರು ಪತ್ರಿಕೋದ್ಯಮದ ವಿದ್ಯಾರ್ಥಿಗಳು ಪ್ರಸಕ್ತ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕವಾದ್ದರಿಂದ ನಿತ್ಯ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್ ಎಸ್ ಕಟ್ಟಿಮನಿ ಮಾತನಾಡಿ ಇಂದು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹೆಚ್ಚಿನ ರೀತಿಯಲ್ಲಿ ಬದಲಾವಣೆಗಳಾಗಿದ್ದು, ಅವುಗಳಲ್ಲಿ ಬಹುಮಾದ್ಯಮ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿದ್ದು, ಇಂದು ಈ ಕ್ಷೇತ್ರದಲ್ಲಿ ಅತಿ ಹೆಚ್ಚು ಹಣದ ಹರಿವು ಹರಿದು ಬರುತ್ತಿದ್ದು, ಕ್ರಿಯಾಶೀಲತೆ ಇದ್ದವರಿಗೆ ಈ ಕ್ಷೇತ್ರದಲ್ಲಿ ಅವಕಾಶಗಳು ಕೈ ಬೀಸಿ ಕರೆಯುತ್ತಿವೆ ಎಂದರು.

ಕಾರ್ಯಕ್ರಮದಲ್ಲಿ ವಿಭಾಗದ ಉಪನ್ಯಾಸಕರಾದ ಡಾ ಪ್ರಭಾಕರ್ ಕಾಂಬಳೆ ಮತ್ತು ಡಾ ಈಶ್ವರಗೌಡ ಪಾಟೀಲ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪತ್ರಿಕೋದ್ಯಮ ವಿಷಯಕ್ಕೆ ಪ್ರವೇಶ ಪಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು. ಅತಿಥಿಗಳನ್ನು ಐಶ್ವರ್ಯ ರಾಜಪೂರೋಹಿತ ಪರಿಚಯಿಸಿದರು ಮತ್ತು ಶಿಲ್ಪಾ ಸತರಡ್ಡಿ ಸ್ವಾಗತಿಸಿದರು. ಕಾರ್ಯಕ್ರವನ್ನು ಸ್ವಾತಿ ಪಾಟೀಲ ಮತ್ತು ಸುನೀಲ ಗದ್ದೇಪ್ಪಗೋಳ್ ನಿರೂಪಿಸದರು. ಮಹಾದೇವ ದಾಬೋಲಿ ವಂದಿಸಿದರು.

–ನಿವೇದಿತಾ

# "ವಿದ್ಯಾರ್ಥಿಗಳಿಂದ ರಕ್ತದಾನ"




ದೇಶದ ಪ್ರತಿಯೊಬ್ಬ ವ್ಯಕ್ತಿಯು ರಕ್ತದಾನದ ಮಹತ್ವವನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಆದ್ದರಿಂದ ವಿದ್ಯಾರ್ಥಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಿದರೆ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು ಎಂದು ನಿವೃತ್ತ ವೈದ್ಯಾಧಿಕಾರಿಗಳಾದ ಡಾ. ವಿ.ಡಿ ಕರಪೂರಮಠ ವಿದ್ಯಾರ್ಥಿಗಳಿಗೆ ಕರೆ ನೀಡಿದರು.


ಅವರು ಕರ್ನಾಟಕ ಕಲಾ ಮಹಾವಿದ್ಯಾಲಯ ದಲ್ಲಿ "ಆಜಾದಿ-೭೦"ಎಂಬ ವಿಶೇಷ ಕಾರ್ಯಕ್ರಮಗಳ ಸರಣಿಯ ಕಾರ್ಯಕ್ರಮವಾದ ರಕ್ತದಾನ ಶಿಬಿರವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಹಿಮೋಪೋಲಿಯಾ ಸೊಸೈಟಿ ಮತ್ತು ಕರ್ನಾಟಕ ಕ್ಯಾನ್ಸರ್ ಆಸ್ಪತ್ರೆ ಹುಬ್ಬಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದು ಅನೇಕ ಪತ್ರಿವರ್ಷ ಒಂದರಿಂದ ಎರಡು ಲಕ್ಷ ಜನ ಅಪಘಾತದಿಂದ ಮೃತಪಡುತ್ತಿದ್ದು ಅದರಲ್ಲೂ ಹೆಚ್ಚಾಗಿ ರಕ್ತಸ್ರಾವದಿಂದ ಹೆಚ್ಚು ಜನ ಸಾಯುತಿ-ದ್ದಾರೆ. ಆದ್ದರಿಂದ ನಾವೆಲ್ಲರೂ ರಕ್ತಾದನದಂತಹ ಉತ್ತಮ ಕಾರ್ಯಗಳನ್ನು ಮಾಡಿದರೆ ಕೆಲವು ಜನರ ಜೀವನ ಉಳಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು. ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ೧೮ನೇ ವಯಸ್ಸಿನಿಂದ ೬೦ ವರ್ಷದವರೆಗೆ ನಿಯಮಿತವಾಗಿ ರಕ್ತದಾನ ಮಾಡಿದ್ದೇ ಆದ-'ಲ್ಲಿ ಅವನು ತನ್ನ ಜೀವಿತ ಅವಧಿಯಲ್ಲಿ ೫೦೦ ಜನರಿಗೆ ರಕ್ತದಾನ ಮಾಡಬಹುದು ಎಂದರು. ಇಂದು ಯುವ ಜನತೆ ಹೆಚ್ಚಾಗಿ ಅಪಘಾತದಿಂದ ಮೃತ್ತರಾಗುತಿದ್ದರಿಂದ ಅಂತಹವರ ಜೀವನ ಉಳಿಸಲು ಇಂದು ಬಹಳ ಮುಖ್ಯವಾಗಿ ರಕ್ತದ ಅವಶ್ಯಕತೆ ಇದ್ದು, ಸದ್ಯ ಪ್ರತಿ ವರ್ಷ ೪ ರಿಂದ ೫ ಕೋಟಿ ಯುನಿಟ್‌ಗಳ ರಕ್ತದ ಅವಶ್ಯಕತೆ ಇದ್ದು, ಅದರ ಸಂಗ್ರಹಣೆಗಾಗಿ ಜನರಲ್ಲಿ ರಕ್ತದಾನದಂತಹ ಶಿಬಿರಗಳನ್ನು ಹಮ್ಮಿಕೊಳ್ಳುವುದರಿಂದ ರಕ್ತಸಂಗ್ರಹ ಮಾಡಬಹುದಾಗಿದೆ ಎಂದು ವಿವರಿಸಿದರು. ಈ ಸಂದರ್ಭದಲ್ಲಿ ೭೦ ಯುನಿಟ್‌ಗಳು ವಿದ್ಯಾರ್ಥಿಗಳ ರಕ್ತದಾನದಿಂದ ಸಂಗ್ರಹಿಸಲಾಯಿತು.

–ಶಿಲ್ಪಾ

# *ನಿಸರ್ಗ ತಾಣ*

ಕವಿಯಾಗಲು ಕವನ ಬರೆಯಬೇಕಾಗಿಲ್ಲ ನಿನ್ನ
ಹೆಸರನೊಮ್ಮೆ ಕೂಗಿ ಕರೆದರೆ ಸಾಕು,
ರಸಿಕನಾಗಲು ನಿನ್ನ ಸ್ರಷ್ಟಿಸಬೇಕಾಗಿಲ್ಲ ನಿನ್ನನ್ನೊಮ್ಮೆ
ದರ್ಶಿಸಿದರೆ ಸಾಕು,
ನನ್ನ ನಿದ್ರೆಗೆ ನಿನ್ನ ಲಾಲಿಯು ಬೇಡ ನಿನ್ನ
ಮಮತೆಯ ಮಡಿಲೊಂದೇ ಸಾಕು,
ನಿನ್ನ ಅಳಿಸದಿದ್ದರೆ ನಾ ನಾಗುವೆ ಮಾನವ
ಉಳಿಸಿದರೆ ನಾನಾಗುವೆ ದೇವಮಾನವ,
ನಿನ್ನ ಬೆಳೆಸಲೆತ್ನಿಸಿದವರೆಲ್ಲ ಸಾಕ್ಷಾತ್ದೇವ
ಅವಳ್ಯಾರೆಂದು ನಿಮಗೆಲ್ಲ ಗೊತ್ತೇ
ಅವಳೇ ನಮ್ಮ ಪ್ರಕೃತಿಮಾತೆ.



–ಕುಮಾರ್

ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬ್ಳೆ, ಡಾ. ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಅಭಿಷೇಕ್, ಅಂಕಿತ
ಪುಟ ವಿನ್ಯಾಸ: ಶ್ರೀಹರಿ.